# ಕರ್ನಾಟಕ ಸರ್ಕಾರ

**ವಿಷಯ:** ಶ್ರೀ ಆರ್.ಹೆಚ್.ಹರಮಗಟ್ಟಿ, ಅಂದಿನ ಸ.ಇಂ.(ವಿಭಾಗ-2), ಲೋಕೋಪಯೋಗಿ ಉಪವಿಭಾಗ, ಹಾನಗಲ್ ಪ್ರಸ್ತುತ ಲೋಕೋಪಯೋಗಿ ಉಪವಿಭಾಗ, ರಾಣೆಬೆನ್ನೂರು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಅಧಿಕೃತ ಜ್ಞಾಪನ ಸಂ: ಗ್ರಾಅಪ 02 ಸೇಶಿಕಾ 2020, ದಿ:10.01.2020
2. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂ: ಗ್ರಾಅಪ 28 ಇಎನ್‌ಕ್ಯೂ 2020, ದಿನಾಂಕ:19.02.2021
3. ಶ್ರೀ ಆರ್.ಹೆಚ್.ಹರಮಗಟ್ಟಿ, ಅಂದಿನ ಸ.ಇಂ.(ವಿಭಾಗ-2), ಲೋಕೋಪಯೋಗಿ ಉಪವಿಭಾಗ, ಹಾನಗಲ್ ಇವರ ಲಿಖಿತ ಹೇಳಿಕೆ ದಿನಾಂಕ: 06.05.2021

***

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದ), ಬೆಂಗಳೂರು ಇವರ ಅಧಿಕೃತ ಜ್ಞಾಪನ ಸಂಖ್ಯೆ: ಸಿಬಿಎಸ್/151/ಕಿಇಂ/ವರ್ಗಾ/ಇಎಸ್ಇ/2019-20, ದಿ:10.10.2019ರಲ್ಲಿ ಶ್ರೀ ಆರ್.ಹೆಚ್.ಹರಮಗಟ್ಟಿ, ಸ.ಇಂ.(ವಿಭಾಗ-2), ಲೋಕೋಪಯೋಗಿ ಉಪವಿಭಾಗ, ಹಾನಗಲ್ ಇವರ ಸೇವೆಯನ್ನು ಗ್ರಾ.ಅ.ಪಂ.ರಾಜ್ ಇಲಾಖೆಯ ವಶಕ್ಕೆ ನೀಡಿದ ಹಿನ್ನಲೆಯಲ್ಲಿ ಮೇಲೆ ಓದಲಾದ ಕ್ರ.ಸಂ.(1)ರ ಸರ್ಕಾರದ ಅಧಿಕೃತ ಜ್ಞಾಪನದಲ್ಲಿ ಸದರಿಯವರಿಗೆ ಪಂ.ರಾ.ಇಂ. ಉಪವಿಭಾಗ, ಸೊರಬ ಇಲ್ಲಿ ಖಾಲಿಯಿರುವ ಕಿರಿಯ ಇಂಜಿನಿಯರ್ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಲಾಗಿತ್ತು. ಆದರೆ ಸದರಿಯವರು ಸ್ಥಳನಿಯುಕ್ತಿಗೊಳಿಸಲಾದ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದ ಕಾರಣ ದಿ:15.05.2020ರಂದು ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು. ಸದರಿ ಕಾರಣ ಕೇಳುವ ನೋಟೀಸಿಗೆ ನಿಗದಿತ ಅವಧಿಯಲ್ಲಿ ಲಿಖಿತ ಹೇಳಿಕೆ ನೀಡದೆ ಕರ್ತವ್ಯ ಲೋಪವೆಸಗಿದ ಹಿನ್ನಲೆಯಲ್ಲಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ & ಮೇಲ್ಮನವಿ) ನಿಯಮಗಳು 1957ರ ನಿಯಮ 12(1)ರಡಿ ಶಿಸ್ತು ಕ್ರಮ ಜರುಗಿಸಲು ನಿರ್ಧರಿಸಿ, ಮೇಲೆ ಓದಲಾದ ಕ್ರ.ಸಂ.(2)ರ ಕಾರಣ ಕೇಳುವ ನೋಟೀಸಿನೊಂದಿಗೆ ಅನುಬಂಧ 1 ಹಾಗೂ 2ನ್ನು ಜಾರಿಗೊಳಿಸಲಾಗಿತ್ತು.

ಸರ್ಕಾರದ ಕಾರಣ ಕೇಳುವ ನೋಟೀಸಿಗೆ ಎದುರಾಗಿ ಆಪಾದಿತರಾದ ಶ್ರೀ ಆರ್.ಹೆಚ್. ಹರಮಗಟ್ಟಿ, ಅಂದಿನ ಸ.ಇಂ.(ವಿಭಾಗ-2), ಲೋಕೋಪಯೋಗಿ ಉಪವಿಭಾಗ, ಹಾನಗಲ್ ಇವರು ಮೇಲೆ ಓದಲಾದ ಕ್ರ.ಸಂ.(3)ರಂತೆ ಸರ್ಕಾರಕ್ಕೆ ಸಲ್ಲಿಸಿರುವ ತಮ್ಮ ಲಿಖಿತ ಹೇಳಿಕೆಗಳಲ್ಲಿ ಸ.ಕಾ.ಇಂ., ಲೋಕೋಪಯೋಗಿ ಉಪವಿಭಾಗ, ಹಾನಗಲ್ ಇವರು ಕರ್ತವ್ಯದಿಂದ ಬಿಡುಗಡೆಗೊಳಿಸದ ಕಾರಣ ಗ್ರಾ.ಅ.ಪಂ.ರಾಜ್ ಇಲಾಖೆಯಿಂದ ಸ್ಥಳನಿಯುಕ್ತಿಗೊಳಿಸಲಾದ ಪಂ.ರಾ.ಇಂ. ಉಪವಿಭಾಗ, ಸೊರಬ ಇಲ್ಲಿನ ಕಿರಿಯ ಇಂಜಿನಿಯರ್ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಶ್ರೀ ಆರ್.ಹೆಚ್.ಹರಮಗಟ್ಟಿ, ಅಂದಿನ ಸ.ಇಂ., ಲೋಕೋಪಯೋಗಿ ಉಪವಿಭಾಗ, ಹಾನಗಲ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಗಿದೆ. ಸದರಿಯವರು ಸ.ಕಾ.ಇಂ. ರವರು ಕರ್ತವ್ಯದಿಂದ ಬಿಡುಗಡೆಗೊಳಿಸದ ಕಾರಣ ಪಂ.ರಾ.ಇಂ. ಉಪವಿಭಾಗ, ಸೊರಬ ಇಲ್ಲಿನ ಕಿರಿಯ ಇಂಜಿನಿಯರ್ ಹುದ್ದೆಗೆ ಹಾಜರಾಗಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ, ಇದಕ್ಕೆ ಪೂರಕವಾಗಿ ತಮ್ಮನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಕೋರಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರಿಗಾಗಲಿ ಅಥವಾ ಮೇಲಾಧಿಕಾರಿಗಳಿಗಾಗಲಿ ಮನವಿ ಸಲ್ಲಿಸಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ಮುಂದುವರೆದು, ಸದರಿಯವರ ವಿರುದ್ಧ ನಿಯಮ 12ರಡಿ ಶಿಸ್ತು ಕ್ರಮ ಪ್ರಾರಂಭಿಸುವ ಮೊದಲು ದಿನಾಂಕ:15.05.2020ರಂದು ನೀಡಿದ ನೋಟೀಸಿಗೆ ಎದುರಾಗಿ ತಡವಾಗಿ ಸಲ್ಲಿಸಿದ್ದ ಲಿಖಿತ ಹೇಳಿಕೆಯಲ್ಲಿ ತಾವು ನಿವೃತ್ತಿ ಅಂಚಿನಲ್ಲಿರುವುದರಿಂದ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದುವರೆಸುವಂತೆ ಲೋಕೋಪಯೋಗಿ ಇಲಾಖೆಗೆ ಕೋರಲಾಗಿದೆ ಎಂದು ತಿಳಿಸಿದ್ದರು. ಆದರೆ ಸದರಿಯವರ ಸೇವಾ ವಿವರಗಳನ್ನು ಪರಿಶೀಲಿಸಲಾಗಿ, ಅವರ ಜನ್ಮ ದಿನಾಂಕ: 01.06.1966 ಆಗಿದ್ದು, 2026ನೇ ಸಾಲಿಗೆ ವಯೋನಿವೃತ್ತಿ ಹೊಂದಲಿದ್ದಾರೆ. ಹಾಗಾಗಿ ಸದರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿ ಪರಿಗಣನಾರ್ಹ ಅಂಶಗಳು ಕಂಡಬರುವುದಿಲ್ಲ. ಆಪಾದಿತರಿಗೆ ಸ್ಥಳನಿಯುಕ್ತಿಗೊಳಿಸಿದ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ಬಹಳಷ್ಟು ಸಮಯಾವಕಾಶವನ್ನು ನೀಡಲಾಗಿದ್ದರೂ, ಸ್ಥಳನಿಯುಕ್ತಿಗೊಳಿಸಲಾದ ಪಂ.ರಾ.ಇಂ. ಉಪವಿಭಾಗ, ಸೊರಬ ಇಲ್ಲಿನ ಕಿರಿಯ ಇಂಜಿನಿಯರ್ ಹುದ್ದೆಯ ಕರ್ತವ್ಯಕ್ಕೆ ಹಾಜರಾಗದೆ ದುರ್ನಡತೆ ಎಸಗಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶ್ರೀ ಆರ್.ಹೆಚ್.ಹರಮಗಟ್ಟಿ, ಅಂದಿನ ಸ.ಇಂ., ಲೋಕೋಪಯೋಗಿ ಉಪವಿಭಾಗ, ಹಾನಗಲ್ ಇವರ ವಿರುದ್ಧದ ಸಾಬೀತಾದ ಆರೋಪಕ್ಕನುಗುಣವಾಗಿ ಸದರಿಯವರಿಗೆ ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 28 ಇಎನ್‌ಕ್ಯೂ 2020,**
**ಬೆಂಗಳೂರು, ದಿನಾಂಕ:07.01.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಆರ್.ಹೆಚ್.ಹರಮಗಟ್ಟಿ, ಅಂದಿನ ಸ.ಇಂ., ಲೋಕೋಪಯೋಗಿ ಉಪವಿಭಾಗ, ಹಾನಗಲ್ ಪ್ರಸ್ತುತ ಲೋಕೋಪಯೋಗಿ ಉಪವಿಭಾಗ, ರಾಣೆಬೆನ್ನೂರು ಇವರ ವಿರುದ್ಧದ ಸಾಬೀತಾದ ಆರೋಪಕ್ಕನುಗುಣವಾಗಿ ಸದರಿಯವರಿಗೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ & ಮೇಲ್ಮನವಿ) ನಿಯಮಗಳು 1957ರ ನಿಯಮ 1957ರ ನಿಯಮ 8(iii) ರ ಅನುಸಾರ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಹೊಂದದಂತೆ ತಡೆಹಿಡಿಯುವ ದಂಡನೆಯನ್ನು ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶದ ಅನುಸಾರ
ಮತ್ತು ಅವರ ಹೆಸರಿನಲ್ಲಿ

7/1/22

**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

7/01/2022

**ಇವರಿಗೆ:**

1. ಮಹಾಲೇಖಪಾಲರು, (ಲೆಕ್ಕಪತ್ರ ಅ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದ್ ರಾವ್ ಸರ್ಕಲ್, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಸಂಪರ್ಕ & ಕಟ್ಟಡಗಳು(ದ), ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ.
6. ಸಂಬಂಧಿಸಿದ ಅಧಿಕಾರಿಗೆ.

**ಪ್ರತಿಯನ್ನು:**

1. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಜಂಟಿ ಕಾರ್ಯದರ್ಶಿಗಳು, (ಆಡಳಿತ-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಶಾಖೆ
4. ಶಾಖಾ ರಕ್ಷಾ ಕಡತ / ವೆಬ್ ಸೈಟ್ ನಲ್ಲಿ ಪ್ರಕಟಿಸಲುಶಾಖಾ ರಕ್ಷಾಕಡತ.